


Rotary

# विश्वमित्रः
# ವಿಶ್ವಮಿತ್ರ
# VISHWAMITHRA

Weekly House Bulletin of Rotary Club Shimoga, R.I. Dist. 3182

UNITE FOR GOOD
Rotary

Rtn. Francesco Arezzo
RI President 2025-26

| Rtn. K. Palaksha | Rtn. Anand R. | Rtn. Vishwas Y. | Rtn. M. Madhavachar |
|---|---|---|---|
| District Governor 2025-26 | President, Mob: 99800 93066 | Secretary, Mob : 99800 63180 | Bulletin Editor, Mob: 98862 73495 |

We meet every Wednesday at 6.45p.m. at Rotary Youth Centre, Sowlanga Road, L.B.S.Nagar, Shivamogga- 577 204

ಸಂಪುಟ – 68 ಸಂಚಿಕೆ –12 ದಿನಾಂಕ : 24–09–2025


## ದಿನಾಂಕ: 24.09.2025ರ ವಾರದ ಸಭೆ

**ಈ ವರ್ಷದ 12 ನೇ ಸಭೆ. ಮೊದಲ ಕೌಟುಂಬಿಕ ಸ್ನೇಹಮಿಲನದ ಸಭೆ ಹಾಗೂ ಹಾಸ್ಯ ಸಂಜೆ ಇದಕ್ಕೊಂದು ಶಿರೋನಾಮೆ ನಮ್ಮ ಅಧ್ಯಕ್ಷರಿಂದ "ಮನೋಹರ ಶಾಯಿರಿ ಸಂಜೆ" ಕಾರ್ಯಕ್ರಮ – ನಾಡಿನ ಖ್ಯಾತ ಶಾಯಿರಿ ಕವಿ, ಸಾವಿರ ಶಾಯಿರಿ ಸರದಾರರೆಂದೇ ಖ್ಯಾತರಾಗಿರುವ ಹಾಲಿ ಬೆಂಗಳೂರಿನಲ್ಲಿ ನೆಲೆಸಿರುವ, ಶಿವಮೊಗ್ಗೆಯಲ್ಲಿ ಹುಟ್ಟಿ ಬೆಳೆದ ಶ್ರೀ ಅಸಾದುಲ್ಲ ಬೇಗ್ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದ ಈ ಕಾರ್ಯಕ್ರಮಕ್ಕೆ ಆಗಮಿಸಿದ್ದ ರೋಟರಿ ಬಂಧುಗಳು ಶ್ರೀ ಅಸಾದುಲ್ಲಾ ಬೇಗ್‌ರವರ ಮಾತಿನ ಶೈಲಿಗೆ ಶಾಯಿರಿಗೆ ತಮ್ಮದೇ ರೀತಿಯಲ್ಲಿ ವಾಹ್ ವಾಹ್ ಎಂದು ಪ್ರತಿಕ್ರಿಯಿಸಿದ ಸಭೆಯು ಹಲವರ ಮನಸ್ಸಿಗೆ ಮುದ ನೀಡಿ ಯಶಸ್ವಿಯಾಯಿತು. ವೇದಿಕೆಯಲ್ಲಿ ಮುಖ್ಯ ಅತಿಥಿಗಳೊಂದಿಗೆ ಅಧ್ಯಕ್ಷರಾದ ರೊ.ಆರ್.ಆನಂದ್ ಮತ್ತು ಕಾರ್ಯದರ್ಶಿ ರೊ.ವಿಶ್ವಾಸ್ ಎಲಬುರ್ಗಿ ಇವರುಗಳು ಉಪಸ್ಥಿತರಿದ್ದು ಸಭೆ ಅಚ್ಚುಕಟ್ಟಾಗಿ ಮನರಂಜನಾತ್ಮಕವಾಗಿ ಯಶಸ್ವಿಯಾಗಿ ಮೂಡಿಬಂದಿತು.**




ರೊ. ಶ್ರೀಮತಿ ಹೇಮಾವತಿಯವರು "ನೀಡು ಶಿವ ನೀಡದಿರು ಶಿವ, ಬಾಗುವುದು ನನ್ನ ಕಾಯ" ಎಂಬ ಪ್ರಸಿದ್ಧ ಗೀತೆಯನ್ನು ಹಾಡಿ ಪ್ರಾರ್ಥಿಸಿದರು. ಇಂದು ನಿಧನರಾದ ನಾಡಿನ ಖ್ಯಾತ ಕಾದಂಬರಿಕಾರ, ಹಲವಾರು ಮೇರು ಕೃತಿಯನ್ನು ರಚಿಸಿದ್ದ, "ಸರಸ್ವತಿ ಸಮ್ಮಾನ್" ಪ್ರಶಸ್ತಿ ಮತ್ತು ಪದ್ಮವಿಭೂಷಣ ಪ್ರಶಸ್ತಿ ಪುರಸ್ಕೃತರಾಗಿದ್ದ ಶ್ರೀ ಎಸ್.ಎಲ್. ಭೈರಪ್ಪನವರು ನಿಧನರಾಗಿದ್ದು, ಮೃತರ ಗೌರವಾರ್ಥ ಮೌನವಾಚರಿಸಿ ಶ್ರದ್ಧಾಂಜಲಿ ಸಲ್ಲಿಸಿ ಅವರ ಆತ್ಮಕ್ಕೆ ಶಾಂತಿ ಕೋರಲಾಯಿತು. ರೊ.ಎಸ್.ಜಿ. ಗೋಪಾಲ್‌ರವರು ಎಂದಿನಂತೆ ಹಾಸ್ಯಮಯ ಶೈಲಿಯಲ್ಲಿ ಸರ್ವರನ್ನು ಸ್ವಾಗತಿಸಿದರು. ಜೊತೆಗೆ ಹಾಸ್ಯದ ತುಣುಕಿನ ಕಥೆಯೊಂದನ್ನೂ ಹೇಳಿದರು. ಕಾರ್ಯದರ್ಶಿ ರೊ.ವಿಶ್ವಾಸ್ ಎಲಬುರ್ಗಿಯವರು ಹುಟ್ಟು ಹಬ್ಬದ ಮತ್ತು ವಿವಾಹ ವಾರ್ಷಿಕೋತ್ಸವದ






ಶುಭಾಶಯಗಳನ್ನು ತಿಳಿಸಿದರು. ರೊ.ನೀತು ದೀಪಕ್‌ರವರ ಪರವಾಗಿ ರೊ.ವೀರಣ್ಣ ಎ. ಹುಗ್ಗಿಯವರು ವೇದಿಕೆಗೆ ಆಗಮಿಸಿ ನೆನಪಿನ ಕಾಣಿಕೆ ಸ್ವೀಕರಿಸಿದರು. ಕಳೆದ ತಿಂಗಳು ವಿವಾಹ ವಾರ್ಷಿಕೋತ್ಸವ ಆಚರಿಸಿಕೊಂಡ ರೊ.ಎನ್.ಜಿ. ಶಶಿಧರ್ ಮತ್ತು ಶ್ರೀಮತಿ ಅನುಪಮರವರು ವೇದಿಕೆಗೆ ಆಗಮಿಸಿ ನೆನಪಿನ ಕಾಣಿಕೆ ಪಡೆದರು.

ರೊ. ಡಿ.ಎಲ್. ಮಂಜುನಾಥ್‌ರವರು ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಕವಿ ಶ್ರೀ ಅಸಾದುಲ್ಲಾ ಬೇಗ್‌ರವರನ್ನು ಸಭೆಗೆ ಪರಿಚಯಿಸಿದರು. ಹಿಂದೆ ಮೊಗಲ್ ಶಾಹಿ ಆಡಳಿತದ ಸಾಮ್ರಾಜ್ಯದಲ್ಲಿ ಪ್ರಚಲಿತದಲ್ಲಿದ್ದ ಈ ಶಾಯಿರಿಗಳು 14, 15 ನೇ ಶತಮಾನದಲ್ಲಿ ಕಬೀರ್ ಕಾ ದೋಹೆ ಎಂದು ಪ್ರಸಿದ್ಧವಾಗಿದ್ದ ಶಾಯಿರಿಗಳು ಈಗ ಅಸಾದುಲ್ಲಾ ಬೇಗ್‌ರವರಿಂದ ರಚಿಸಲ್ಪಟ್ಟು ಕನ್ನಡ ಶಾಯಿರಿ ಕವಿ

### ಈ ವಾರದ ಸಭೆ

**ದಿನಾಂಕ: 01–10–2025, ಬುಧವಾರ** **ಸಂಜೆ 6:45**

## ಕ್ಲಬ್ ಅಫೇರ್ಸ್

**6:45 ರಿಂದ 7:05 ರತನಕ ಸ್ನೇಹಮಿಲನ**
**7:05 ರಿಂದ ಸಭಾರಂಭ**

**ದಯಮಾಡಿ ರೋಟರಿ ಸದಸ್ಯರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ.**

**ಸ್ಥಳ: ರೋಟರಿ ಯುವ ಕೇಂದ್ರ,** ಸವಳಂಗ ರಸ್ತೆ, ಶಿವಮೊಗ್ಗ












ಎಂದು ಪ್ರಸಿದ್ಧರಾಗಿದ್ದಾರೆ. ಇವರ ಶಾಯಿರಿಯ 5 ಪುಸ್ತಕಗಳು ಪ್ರಕಟಗೊಂಡಿದ್ದು, ಹಲವಾರು ಕಾರ್ಯಕ್ರಮಗಳಲ್ಲಿ ಹರಟೆ ಮಲ್ಲ ಎನಿಸಿಕೊಂಡಿದ್ದಾರೆ. ಕಾವ್ಯನಾಮ 'ರವಿ ಎಫ್ ಎ ಬೇಗ್' ಮುಗ್ಧ ಬೇಗ್ ಎಂಬುದಾಗಿದ್ದು, ಕರ್ನಾಟಕ ಚುಟುಕುಶ್ರೀ, ಸುವರ್ಣ ಪ್ರಶಸ್ತಿ, ಹಾಸ್ಯಶ್ರೀ, ಶಾಯಿರಿ ಸಾಮ್ರಾಟ್, ಕನ್ನಡದ ಗಾಲಿಬ್ ಎನಿಸಿಕೊಂಡ ಬೇಗ್ ಹಲವಾರು ಪ್ರಶಸ್ತಿಗಳಿಗೆ ಭಾಜನರಾಗಿ ಖ್ಯಾತರಾಗಿದ್ದಾರೆ ಎಂದು ಪರಿಚಯಿಸಿದರು.

ಮುಖ್ಯ ಅತಿಥಿಗಳಾದ ಶ್ರೀ ಅಸಾದುಲ್ಲಾ ಬೇಗ್ ತಮ್ಮ ಮಾತನ್ನು ಆರಂಭಿಸುತ್ತಾ, ಈ ಶಾಯಿರಿಗಳನ್ನು ಚುಟುಕು ಕವನಗಳು, ಹನಿಗವನಗಳು ಮತ್ತು ಕೆಲವರು ವಚನಗಳೆಂದೂ ಹೇಳುತ್ತಾರೆ. ಹಾಸ್ಯ ವಿಡಂಬನೆ ಎನ್ನುವುದನ್ನು ಮನದಾಳದ ನೋವನ್ನು ಹೊರಹಾಕುತ್ತದೆ ಎನ್ನುತ್ತಾ, "ಬೆದರಿಸಿ ಅಮೃತ ಕೊಟ್ಟರೂ ಬೇಕಿಲ್ಲ. ಮುದ್ದಿನಿಂದ ವಿಷ ಕೊಟ್ಟರೂ ಪರವಾಗಿಲ್ಲ. ಸಾಯುವುದಂತೂ ಇದ್ದೇ ಇದೆ. ಸಾಯುವಾಗಲೂ ಖುಷಿ ಕೊಟ್ಟವನಿಗೆ ನಮನ ಎಂದರು. ಅಮೇರಿಕಾಕ್ಕೆ ಹೋಗಿ ಶಾಯಿರಿಗಳನ್ನು ಹೇಳಿದ್ದೇನೆ. ಹಲವಾರು ಕಾರ್ಯಕ್ರಮಗಳನ್ನು ಕೊಟ್ಟಿದ್ದೇನೆ. ಆದರೂ ನನ್ನ ನೆಲ ಶಿವಮೊಗ್ಗ. ಓದಿದ್ದು ಬಿ.ಕಾಂ.ಎಲ್.ಎಲ್.ಬಿ. ಓದಿ ಜೀವನ ಸಾರ್ಥಕತೆ ಪಡೆದಿದ್ದೇನೆ. ನನ್ನ ಶಾಯಿರಿ ಪತ್ರಿಕೆಗಳ ಪುಟ ಪುಟಗಳಲ್ಲಿ ಪ್ರಕಟವಾಗಿದೆ ಎಂದಿದ್ದರು ಗೆಳೆಯರು ಯಾರು ಓದಿದ್ದರೋ ಬಿಟ್ಟಿದ್ದರೂ ಗೊತ್ತಿಲ್ಲ. ನನ್ನವಳು ಜೇನುತುಪ್ಪ ಹಾಕಿ ನೆಕ್ಕಿದ್ದಳೋ ಗೊತ್ತಿಲ್ಲ. ಯಾರು ನನ್ನನ್ನು ತಟ್ಟಲು ಆಗುವುದಿಲ್ಲ. ಮೂಗು ಮುರಿದವರ ಮುಖ ನೋಡುತ್ತೇನೆ ಬಿಡುವುದಿಲ್ಲ ಎಂದಿದ್ದೆ ಎಂಬುದನ್ನು ಶಾಯಿರಿಯ ಮಾದರಿಯಲ್ಲೇ ತಿಳಿಸಿದರು. ನಮ್ಮ ಮನೆಯಲ್ಲಿ ನಾನೇ ದೊಡ್ಡಮಗ. ಬದುಕ ಬೇಕೆನ್ನುವ ಛಲ ನನಗಿತ್ತು ಅದನ್ನು ಸಾಧಿಸಿದೆ. ಪಾಮಸ್ತ್ರಿ ಮತ್ತು ಫೇಸ್ ರೀಡಿಂಗ್ ಕೆಲಸವನ್ನೂ ಮಾಡಿದ್ದೇನೆ. 1982 ರಲ್ಲಿ ಹಿಮಾಲಯಕ್ಕೆ ಟ್ರೆಕ್ಕಿಂಗ್‌ಗೆ ಹೋದೆ. ಹೀಗೆ ಜೀವನದ ಹಲವಾರು ಮಜಲುಗಳನ್ನು ದಾಟಿದೆ. ಕುವೆಂಪು, ಭೈರಪ್ಪ, ತೇಜಸ್ವಿ, ಇಟಗಿ ಈರಣ್ಣ ಇವರುಗಳೆಲ್ಲರ ಬರಹ ನನಗೆ ಸ್ಫೂರ್ತಿಯಾಗಿದ್ದು, ಕಾಲುಂಗುರ, ಕುಂಕುಮ, ನಮ್ಮಲ್ಲಿರಲಿ, ನನ್ನ ನೆನಪು ನಿಮ್ಮಲ್ಲಿ ಶಾಶ್ವತವಾಗಿರಲಿ, ನನ್ನ ನೆನಪಿಸಿದ ನಿಮಗೆ ನಾನೇನೂ ಕೊಡಲಿ. ನಾನು ಕಂಡ ನನ್ನ ಕನಸಿನ ದಾರಿಯಲಿ, ಹೀಗೆ ಪುಂಖಾನು ಪುಂಖವಾಗಿ ಶಾಯಿರಿಗಳನ್ನು ಪ್ರಸ್ತುತ ಪಡಿಸುತ್ತಾ, ಪ್ರೀತಿಯ ವಿಷಯದಲ್ಲಿ ಕೆಲವೊಂದು ಮಾತುಗಳನ್ನು ತಿಳಿಸಿದ ಅವರು ಜೀವನದಲ್ಲಿ ಪ್ರೀತಿಯ ಆರಂಭವಾಗುತ್ತದೆ. ಇಲ್ಲದಿದ್ದರೆ ವನವಾಸದಲ್ಲಿ ರಾಮನ ಜೊತೆ ಸೀತೆ ಇರುತ್ತಿರಲಿಲ್ಲ. ಸಮಾಧಿ ಕಟ್ಟಿದ ತಾಜಮಹಲ್ ಸಿಗುತ್ತಿರಲಿಲ್ಲ. ನಿಮ್ಮ ಒಂದು ಮಾತು ಹೃದಯ ತಟ್ಟುವುದಾದರೆ, ರಕ್ತ ಹೆಚ್ಚಿಸುವುದಾದರೆ ಅದು ಒಳ್ಳೆಯ ಕೆಲಸ ಒಂದು ಒಳ್ಳೆಯ ಕೆಲಸಕ್ಕೆ ಬೆನ್ನು ತಟ್ಟಿದರೆ ಅದೂ ಕೂಡ ಶ್ರಮದಾನವೇ. ಮಗುವಂತೆ ನೋಡಿಕೊಂಡರೆ ಅದೂ ಕೂಡ ಸಮಾಧಾನವೇ ಎಂದರು.

ಮುಂದುವರೆದ ಮುಖ್ಯ ಅತಿಥಿ ಅಸಾದುಲ್ಲಾ ಬೇಗ್‌ರವರು, ನದಿ ಮತ್ತು ಭಾವಿಯ ಕಥೆಯೊಂದನ್ನು ಅರುಹಿದರು. ಬಾವಿಯೊಂದು ನದಿಗೆ ಕೇಳಿತಂತೆ, ಅಲೆಮಾರಿ ನೀನು ಅಲ್ಲದೇ ಕೊನೆಯಲ್ಲಿ ಉಪ್ಪುಪ್ಪಾದ ನೀರು ಕೊಡುವಿ, ಆದರೆ ನನ್ನ ನೋಡು, ಬಾಯಾರಿದವ ನನ್ನ ಬಳಿ ಬರುತ್ತಾನೆ. ನಾನು ನೆಲದಿಂದ ಚಿಮ್ಮುತ್ತೇನೆ ಸಿಹಿ ನೀರಾಗಿ. ಹೀಗೆ ತಮ್ಮ ಮಾತಿನ ಶೈಲಿಯಿಂದ ವಾಹ್ ವಾಹ್ ಉದ್ಗಾರವನ್ನು ನೆರೆದ ರೋಟರಿಯ ಸದಸ್ಯರಿಂದ ಪಡೆದರು.

ಸಾರ್ವಜನಿಕವಾಗಿ ಮಾತನಾಡುವಾಗೊಮ್ಮೆ ನನ್ನ ಮಾತನ್ನು ಕೇಳಿಸಿಕೊಂಡ ಕೆಲವರು ಕೇಳಿದರು. ನಿಮ್ಮ ಮಾತೃ ಭಾಷೆಯಾವುದು ಎಂದು, ಏಕೆಂದರೆ ಕನ್ನಡವನ್ನು ಚೆನ್ನಾಗಿ ಮಾತನಾಡುತ್ತಿದ್ದೀರಿ ಯಾದ್ದರಿಂದ. ಆದಕೆ ನಾನುತ್ತರಿಸಿದೆ. ಉರ್ದು ನನ್ನ ಮಾತೃ ಭಾಷೆಯಾದರೂ ಕನ್ನಡ ನನ್ನ ಹೃದಯದ ಭಾಷೆ ಎಂದರು. ಎಂಥಹ ಸಂಗಾತಿ ಬಯಸಿದ್ದೀರಿ ಮತ್ತು ಬೇಕು ಎಂಬ ಕೆಲವರ ಕುಚೋದ್ಯದ ಅಭಿಮಾನಿಗಳ ಪ್ರಶ್ನೆಗೆ– ನನ್ನವಳು ಕಾಳಿದಾಸನ ಕಾವ್ಯ ಕನ್ನಿಕೆಯಂತೆ, ಕುಮಾರವ್ಯಾಸ ವರ್ಣಿಸಿದಂತೆ, ರವಿವರ್ಮನ ಚಿತ್ರಪಟದಂತೆ, ಬೇಲೂರಿನ ಶಿಲಾಬಾಲಿಕೆಯಂತೆ ಇರಬೇಕಿಲ್ಲ ನನಗೆ. ನನ್ನವಳ ಹೃದಯದಲಿ ನನ್ನ ಬಗ್ಗೆ ಮಿಡಿತವಿದ್ದರೆ ಸಾಕು ಅವಳೇ ನನ್ನವಳು. ನನ್ನವಳಿಂದ ನನಗೆ ಸಿಕ್ಕಬೇಕಾದ್ದು ಸಿಕ್ಕಿದೆ ಎಂಬುತ್ತರವನ್ನಿತ್ತಾಗ, ಅತ್ತಿತ್ತ ನೋಡಿ ನುಡಿದ ಅಭಿಮಾನಿಯೊಬ್ಬರೂ ನೀವು ಮನುಷ್ಯರಲ್ಲ ದೇವರೂ ಏಕೆಂದರೆ ನೀವು ಎಲ್ಲರನ್ನೂ ಪ್ರೀತಿಸುತ್ತೀರಿ ಎಂಬ ಮಾತನ್ನು ಕೇಳಿ ಅವಳಲ್ಲಿ ಮತ್ತೆ ಮತ್ತೆ ಬಾಗುವಂತೆ ಮಾಡಿತು ಎಂದರು. ಶ್ರೀ ಅಸಾದುಲ್ಲಾರವರಿಂದ ಸಭೆಯಲ್ಲಿ ಹಲವಾರು ಶಾಯಿರಿಗಳನ್ನು ಪ್ರಸ್ತುತ ಪಡಿಸಲ್ಪಟ್ಟಿತು. ಅದರ ಝಲಕ್ಕೊಂದು ಹೀಗಿದೆ.

**ಹವ್ಯಾಸ ಬದಲಿಸು ಹಣೆ ಬರಹ ಬದಲಾದೀತು**
**ದೃಷ್ಟಿ ಬದಲಿಸು ದೃಶ್ಯವೇ ಬದಲಾದೀತು**
**ದೋಣಿ ಬದಲಿಸಬೇಕೆಂದಿಲ್ಲ**
**ದಿಕ್ಕು ಬದಲಾಯಿಸಿದರೆ ಸಾಕು.**

ತಮ್ಮನ್ನು ದೂರದರ್ಶನ ಕ್ಷೇತ್ರಕ್ಕೆ ಪರಿಚಯಿಸಿದ ಕವಿ ಹಿರೇ ಮಗಳೂರು ಕಣ್ಣನ್, ಅವರ ತಂದೆ ಸವ್ಯಸಾಚಿ ಚಕ್ರವರ್ತಿಯವರೊಂದಿಗೆ ನನ್ನ ಒಡನಾಟ, ಸಹಕಾರದಿಂದ ಬೆಳೆಯುತ್ತಾ ಸಾಗಿದೆ. ಆವಾಗಲೇ ನನಗೆ ಸಾವಿರ ಶಾಯರಿಗಳ ಸರದಾರ ಎಂಬ ಬಿರುದು ಬಂದಿದ್ದು. ನಾವು ಆರೋಗ್ಯವಾಗಿರಲು ಮರೆಯಬೇಕು. ಸತ್ತು ಸತ್ತು ಬದುಕುವುದರಲ್ಲೇ ಜೀವನದಲ್ಲಿ ನಿಜವಾದ ಅರ್ಥವಿದೆ. ಕುಟುಂಬದ ಎಲ್ಲಾ ಸದಸ್ಯರು ಒಟ್ಟಿಗೆ ಸೇರಿ ಜೊತೆಯಲ್ಲೇ ಊಟ ಮಾಡಬೇಕು. ದೂರ ಆಗಬಾರದು. ಪ್ರೀತಿ ಉಳಿಯಬೇಕು ಎಂದರು. ಪ್ರೀತಿಯನ್ನು ಪ್ರೀತಿಯಿಂದ ಬಗ್ಗಿಸಿದರೆ ಹೇಗೆ ! ಮನನೋಯಿಸಿದವನಿಗೆ ನೋಯಿಸದಂತೆ ಬದುಕುವುದೇ ಜೀವನ. ಶಾಶ್ವತವಾದ ಸಿಹಿ ನೆನಪುಗಳಿಗಳಿಂದಷ್ಟೆ ಜೀವನ. ಹೀಗೆ ಸರಳವಾಗಿ, ಸರಾಗವಾಗಿ, ಪ್ರೀತಿ, ಪ್ರೇಮಗಳ ಶಾಯರಿಯನ್ನು ಪ್ರಸ್ತುತ ಪಡಿಸಿದ ಬೇಗ್‌ರವರು ಜೀವನದ ಹಲವಾರು ಸಂದೇಶಗಳನ್ನು ಹೇಳುತ್ತಾ ಕವಿ ಮಿತ್ರನಾದವನು ಹೇಗಿರಬೇಕು ಎಂದರೆ ಹೊಸದೇನು ಬರೆದಿರುವೆ, ವಿಳಾಸ ಕೊಡು ನಾನೇ ಕಳುಹಿಸಿ ಕೊಡುವೆ ಎನ್ನುವಂತಿರಬೇಕು ಎಂದರು.

ನಾಲ್ಕಾರು ಜನಗಳ ಮುಖವನ್ನು ನೋಡುವಾಗಿನ ಆನಂದ ಎಲ್ಲೂ ಸಿಗಲ್ಲ. ಇದು ನಮಾಜಿಗಿಂತನೂ ಒಳ್ಳೆಯದು ಎಂದ ಕವಿಯ ಬಗ್ಗೆ ಉಲ್ಲೇಖಿಸುತ್ತಾ, ಎಲ್ಲರಿಗೂ ಒಳ್ಳೆಯದಾಗಲಿ ಎಂದು ಹಾರೈಸುವಾಗ ಸಂತೋಷವಾಗುತ್ತದೆ. ಅವರನ್ನು ದೇವರು ನೋಡಿಕೊಳ್ಳುತ್ತಾನೆ ಎಂದಾಗ ಖುಷಿಯಾಗುತ್ತದೆ. ನಿಮ್ಮ ಹಾರೈಕೆಗಳೆಲ್ಲವೂ ಶಾಶ್ವತವಾಗಿ ಉಳಿಯುತ್ತೆ ಎಂದರು. ಅವರ ಮಾತಿನ ನಡುವೆ ಕಳೆದು ಹೋದ ನಮ್ಮ ಹೆಣ್ಣು ಮಕ್ಕಳ ಸಂಭ್ರಮದಂತಿದ್ದಂತಹ ದಾವಣೀ ಸಂಸ್ಕೃತಿ ಬಗ್ಗೆ ತಮ್ಮ ವಿಷಾದವಿತ್ತು.

**ಕತ್ತಲ ಅನುಭವಕ್ಕೆ ಕಣ್ಣು ಮುಚ್ಚಿದರೆ ಸಾಕು,**
**ಕತ್ತಲಾಗಬೇಕಿಲ್ಲ.**
**ಮನದ ಮಾತು ಕೇಳಿದರೆ ಸಾಕು,**
**ಛಲದ ಗುರಿ ಸಾಧಿಸಲು.**




ಹೀಗೆ ಹಲವಾರು ಶಾಯರಿಗಳನ್ನು ಉದ್ಧರಿಸಿದ ಕವಿ ಅಸಾದುಲ್ಲಾ ಬೇಗ್‌ರವರ ಮಾತುಗಳನ್ನು ನೀವು ನೇರವಾಗಿ ಕೇಳೇ ಆಸ್ವಾದಿಸಬೇಕು. ಅಧ್ಯಕ್ಷರಾದ ರೊ.ಆರ್.ಆನಂದರವರು ಮಾತನಾಡಿ, ಇಂದು ಸಮಯ ಸರಿದದ್ದೇ ಗೊತ್ತಾಗಲಿಲ್ಲ. ತಮ್ಮ ನೆನಪಿನಂಗಳದ ಮಾತುಗಳನ್ನು ಬಿಚ್ಚಿಟ್ಟ ಅಧ್ಯಕ್ಷರು ತಮ್ಮ ಕಾಲೇಜಿನ ದಿನಗಳಲ್ಲಿ ಹಿಂದಿನ ಬೆಂಚಿನಲ್ಲಿ ಕುಳಿತು ಮಾಡುತ್ತಿದ್ದ ಕುಚೋದ್ಯ ಕವಿತನಗಳ ಬಗ್ಗೆ ತಮ್ಮ ಮಾತುಗಳನ್ನು ಹಂಚಿಕೊಂಡರು. ಇಂದು ಆಗಮಿಸಿದ್ದ ಅಸಾದುಲ್ಲಾರ ಮಾತುಗಳನ್ನು ಕೇಳಿ ಎಲ್ಲರೂ ಸಂತೋಷ ಪಟ್ಟಿದ್ದಾರೆ. ಮತ್ತೊಮ್ಮೆ ಕ್ಲಬ್‌ಗೆ ಬನ್ನಿ ಮಾತಿನ ಮಂಟಪ ಕಟ್ಟೋಣ ಎಂದು ತಿಳಿಸಿ, ಮುಖ್ಯ ಅತಿಥಿಗಳಿಗೆ ತಮ್ಮ ಕೃತಜ್ಞತೆಯನ್ನು ತಿಳಿಸುತ್ತಾ, ಶ್ರೀ ಅಸಾದುಲ್ಲಾ ಬೇಗ್ ದಂಪತಿಗಳಿಗೆ ಹಿರಿಯ ಸದಸ್ಯರಾದ ರೊ. ಟ.ಆರ್. ಅಶ್ವಥನಾರಾಯಣರವರ ಹಸ್ತದಿಂದ ನೆನಪಿನ ಕಾಣಿಕೆ ನೀಡಲಾಯಿತು. ರೊ. ಲಕ್ಷ್ಮೀಆನಂದ್, ಅಧ್ಯಕ್ಷರು ಮತ್ತು ಕಾರ್ಯದರ್ಶಿಯವರು ವೇದಿಕೆಯಲ್ಲಿದ್ದರು. ರೊ. ವಿಶ್ವಾಸ್ ಎಲಬುರ್ಗಿಯವರು ಸರ್ವರಿಗೂ ವಂದಿಸಿದರು. ಕಾರ್ಯಕ್ರಮದ ನಂತರ ಪುಷ್ಕಳ ಭೋಜನ ಏರ್ಪಾಡಾಗಿತ್ತು. ❖

**ಅಭಿನಂದನೆ:**

ನಮ್ಮಕ್ಲಬ್‌ನ ಸದಸ್ಯರಾದ ರೊ. ಕೆ.ರಾಕೇಶ್‌ಗೌಡ ಆದಿತ್ಯ ಎಂಟರ್‌ಪ್ರೈಸಸ್, ಶಿವಮೊಗ್ಗ ಇವರು ರಾಜ್ಯ ಕೃಷಿ ಪರಿಕರಗಳ ಮಾರಾಟಗಾರರ ಸಂಘ (ರಿ) ಬೆಂಗಳೂರು ಇದರ ರಾಜ್ಯ ಸಂಘಟನಾ ಕಾರ್ಯದರ್ಶಿಯಾಗಿ ಆಯ್ಕೆಯಾಗಿದ್ದಾರೆ.

ಕರ್ನಾಟಕ ಹೆಲ್ತ್‌ಕೇರ್ ಸಂಸ್ಥೆಯಿಂದ ನಮ್ಮ ಕ್ಲಬ್‌ನ ಸದಸ್ಯರಾದ ರೊ. ಡಾ.ಗಿರೀಶ್‌ರವರು ವಿದ್ಯಾಭೂಷಣ ಅವಾರ್ಡ್ 2025ನ್ನು ಪಡೆದಿರುತ್ತಾರೆ.

**ಇವರಿಬ್ಬರಿಗೂ ರೋಟರಿ ಕ್ಲಬ್ ಶಿವಮೊಗ್ಗ ವತಿಯಿಂದ ಅಭಿನಂದನೆಗಳು**

**ಕಣ್ಣು ಸುಡುವಿಕೆಗೆ ಮನೆಮದ್ದುಗಳು (Burning sensation of eyes)**

**ರೊ. ಡಾ. ಕಾಂಚನ್ ಕುಲಕರ್ಣಿ,** ಬಿ.ಎ.ಎಂ.ಎಸ್. ಎಂ.ಡಿ. ಪಿಜಿಡಿಸಿಸಿಟಿ
ಪಂಚಮಿ ಆಯುರ್ವೇದ ಚಿಕಿತ್ಸಾ ಕೇಂದ್ರ, ಕುವೆಂಪು ರಸ್ತೆ, ಶಿವಮೊಗ್ಗ

- ಸ್ವಚ್ಛವಾದ ಹತ್ತಿಯನ್ನು ತಣ್ಣೀರಿನಲ್ಲಿ ನೆನೆಸಿ ಕಣ್ಣಿನ ಮೇಲೆ ಇಡುವುದು.
- ಸೌತೆಕಾಯಿ ತುಂಡುಗಳನ್ನು ಕಣ್ಣಿನ ಮೆಲೆ ಇಡುವುದು.
- ಸ್ವಚ್ಛವಾದ ಗುಲಾಬಿ ನೀರಿನ 2&3 ಹನಿಗಳನ್ನು ಕಣ್ಣಿನಲ್ಲಿ ಹಾಕಬಹುದು.
- ಅಲೋವೆರಾ ಗಿಡದ ತಾಜಾ ಜೆಲ್ ಕಣ್ಣು ಸುತ್ತಲು ಹಚ್ಚುವುದು.
- ಹತ್ತಿಯಲ್ಲಿ ತಣ್ಣಗಿನ ಹಾಲನ್ನು ನೆನೆಸಿ ಕಣ್ಣಿನ ಮೇಲೆ ಇಡುವುದು.
- ದೇಹದಲ್ಲಿ ನೀರಿನ ಕೊರತೆಯಿಂದಲೂ ಕಣ್ಣು ಸುಡುವಿಕೆ ಬರುತ್ತದೆ. ಹಾಗಾಗಿ ಸಾಕಷ್ಟು ನೀರು ಕುಡಿಯಿರಿ.
- ಮೊಬೈಲ್ / ಕಂಪ್ಯೂಟರ್ ಹೆಚ್ಚು ಹೊತ್ತು ನೋಡಬಾರದು. ಪ್ರತಿ 20 ನಿಮಿಷಕ್ಕೊಮ್ಮೆ ಕಣ್ಣುಗಳಿಗೆ ವಿಶ್ರಾಂತಿ ನೀಡಿ.
- ಕಲುಷಿತವಾದ ನೀರು ಅಥವಾ ಯಾವುದೇ ದ್ರವವನ್ನು ಕಣ್ಣಿಗೆ ಹಾಕಬೇಡಿ.

**ಸೂಚನೆ: ಸುಡುವಿಕೆ ನಿರಂತರವಾಗಿದ್ದು, ಕೆಂಪಾದ ಕಣ್ಣು, ದೃಷ್ಟಿ ಅಸ್ಪಷ್ಟತೆ ಇದ್ದಲ್ಲಿ ವೈದ್ಯರನ್ನು ಸಂಪರ್ಕಿಸಿ.**

***Rotary Information :-***

## Women in Rotary



Like many organisations in the early 20th century, Rotary had restricted its membership to men. Although there was a strong and growing movement from Clubs in all parts of the world to change Rotary's all-male position, the organisation fiercely resisted the admission of women. In 1987 when the first three women were inducted into the Rotary Club of Duarte (California). Rotary's international Board of Directors officially acted to revoke the Club's charter. The Duarte Club then sued Rotary claiming discrimination based on gender. Rotary resisted every judicial appeal, until the case landed in the US Supreme Court. In 1987, the US Supreme Court, in a unanimous decision, ruled against Rotary.

The Supreme Court ruling was a "wake-up" call for Rotary, but it had an immediate positive impact, not only on Rotary, but on other service Clubs and organisations throughout the USA. The Rotary Board of Directors amended the constitution and bylaws to admit women, and opened the door to women in Rotary worldwide.

This landmark Supreme Court ruling continues to play a major role in protecting and advancing the rights of women at many levels - far beyond what the three first women Rotarians in Duarte could have envisioned.

Today women are a driving force in Rotary. In most Clubs women make up a significant part, and in some cases a majority, of the membership. Women serve as Club Presidents, District Leaders, District Governors, and on the Rotary International Board of Directors. As an organisation, Rotary champions the ongoing struggle for gender equality at the Club and international level.

ಸಂಪಾದಕೀಯ

## ಒಂದು ಕಾರಿನ ಬೆಲೆ...!!



ವಯಸ್ಸಾಗಿ ಹಾಸಿಗೆ ಹಿಡಿದಿದ್ದ ತಂದೆ ತನ್ನ ಮಗಳನ್ನು ಕರೆದು 'ಮಗಳೇ, ನಾನು ನಿನ್ನನ್ನು ಕಷ್ಟಪಟ್ಟು ಓದಿಸಿ ವಿದ್ಯಾವಂತೆ ಮಾಡಿದೆ. ನಾನು ಸತ್ತರೆ ನಿನ್ನ ಜೀವನಕ್ಕಾಗಿ ಯಾವ ಆಸ್ತಿಯನ್ನೂ ಮಾಡಲಿಲ್ಲ. ದುಡಿದ ಹಣವೆಲ್ಲಾ ನಿನ್ನನ್ನು ಓದಿಸಲು ಖರ್ಚಾಯಿತು. ಆದರೆ ನನ್ನ ಬಳಿ ಉಳಿದದ್ದು ಮಾತ್ರ ಮನೆಯ ಹೊರಗೆ ಮೂಲೆಯಲ್ಲಿ ನಾನು ನಿಲ್ಲಿಸಿರುವ ಆ ಹಳೆಯ ಕಾರು ಮಾತ್ರ. ಅದು ಸ್ವಲ್ಪ ಹಳೆಯದ್ದು. ನೀನು ಅದನ್ನು ಮಾರಾಟ ಮಾಡುವ ಮೊದಲು ಆ ಕಾರನ್ನು ತೆಗೆದುಕೊಂಡು ಹೋಗಿ ಹೊರಗೆ ಜನರಿಗೆ ಆ ಕಾರನ್ನು ಮಾರಲು ತಂದಿರುವುದಾಗಿ ಹೇಳು, ನೋಡೋಣ ಜನರು ಆ ಕಾರಿಗೆ 'ಎಷ್ಟು ಬೆಲೆ ಕಟ್ಟುತ್ತಾರೆ' ಎಂದು ತಿಳಿಸಿದ.

ತಂದೆಯ ಮಾತಿನಂತೆ ಆ ಹಳೆಯ ಕಾರನ್ನು ತೆಗೆದುಕೊಂಡು ಪೇಟೆಗೆ ಬಂದಳು. ಹಳೆಯ ಕಾರುಗಳ ಡೀಲರ್‌ಗಳನ್ನು ಭೇಟಿ ಮಾಡಿ ಮನೆಗೆ ವಾಪಸ್ಸು ಬಂದು, 'ಅಪ್ಪಾ 'ಒಬ್ಬ ಹಳೆಯ ಕಾರ್ ಡೀಲರ್ ನಮ್ಮ ಕಾರನ್ನು ನೋಡಿ ಇದು ತುಂಬಾ ಹಳೆಯ ಕಾರು ಹಾಗಾಗಿ 50 ಸಾವಿರ ರೂ. ಕೊಡುವುದಾಗಿ ತಿಳಿಸಿದರು' ಎಂದು ಹೇಳಿದಳು. 'ಸರಿ, ಈ ಕಾರನ್ನು ಪೇಟೆಯಲ್ಲಿ ನಾವು ಕಿರಾಣಿ ಸಾಮಾನುಗಳನ್ನು ತರುವ ಅಂಗಡಿಯ ಮಾಲೀಕನಿಗೆ ತೋರಿಸಿ, ಅಪ್ಪ ಈ ಕಾರನ್ನು ಮಾರಲು ಹೇಳಿದ್ದಾರೆ ನೀವು ಕೊಳ್ಳುವುದಾದರೆ ಎಷ್ಟು ಬೆಲೆಗೆ ಕೊಳ್ಳುವಿರಿ ಎಂದು ಕೇಳಿಕೊಂಡು ಬಾ' ಎಂದು ಹೇಳಿದರು. ಆ ಕಿರಾಣಿ ಅಂಗಡಿ ಮಾಲೀಕ ಈ ಕಾರನ್ನು ನೋಡುತ್ತಾ, 'ಏನಮ್ಮಾ ನಿಮ್ಮ ಹಳೆಯ ಕಾರನ್ನು ಯಾವ ಬೆಲೆಗೆ ಕೊಳ್ಳಲಿ? ನೀವು ಯಾವಾಗಲೂ ನಮ್ಮ ಅಂಗಡಿಯಲ್ಲಿಯೇ ಕಿರಾಣಿ ಸಾಮಾನುಗಳನ್ನು ಖರೀದಿ ಮಾಡುವುದರಿಂದ ನಾನು ಈ ಕಾರನ್ನು 75 ಸಾವಿರ ರೂ. ಗಳಿಗೆ ಕೊಳ್ಳುತ್ತೇನೆ' ಎಂದು ಹೇಳಿದಳು.

ಅಪ್ಪ ಮತ್ತೆ ಹೇಳಿದಂತೆ ಪಕ್ಕದ ನಗರದಲ್ಲಿದ್ದ ಮ್ಯೂಸಿಯಂಗೆ ಬಂದಳು. ಅಲ್ಲಿ ಮ್ಯೂಸಿಯಂನ ಕ್ಯೂರೇಟರ್ ಬಳಿಗೆ ಹೋಗಿ 'ನಮ್ಮ ಈ ಕಾರನ್ನು ಮಾರಲು ನಿರ್ಧರಿಸಿದ್ದೇವೆ. ಎಷ್ಟು ಬೆಲೆಗೆ ಕೊಳ್ಳುವಿರಿ' ಎಂದು ಕೇಳಿ, ವಾಪಸ್ ಮನೆಗೆ ಬಂದು, 'ಅಪ್ಪ, ಇದು ತುಂಬಾ ಹಳೆಯ ಹೋಲ್ಡೆನ್ ಟೊರಾನ ಕಂಪನಿಯ ಕಾರ್ ಆಗಿರುವುದಿರಂದ ಇದು ಆ ದಿನ ಅತ್ಯುತ್ತಮ ದರ್ಜೆಯ ಕಾರಂತೆ. ಹಾಗಾಗಿ 10 ಲಕ್ಷ ರೂಗೆ ಕೊಳ್ಳುವುದಾಗಿ ತಿಳಿಸಿದರು. ನನಗಂತೂ ಆಶ್ಚರ್ಯ ವಾಯಿತು' ಎಂದು ಅಪ್ಪನ ಮುಂದೆ ಆತುರದಿಂದ ಹೇಳಿದಳು.

ಮಗಳ ಮುಖದ ಮೇಲಿನ ಖುಷಿ ನೋಡಿ ಅಪ್ಪ, "ಸೂಕ್ತವಾದ ಸ್ಥಳದಲ್ಲಿ ಮಾತ್ರ ಸೂಕ್ತವಾದ ಬೆಲೆ ಸಿಗುತ್ತದೆ. ಹೋದಲ್ಲೆಲ್ಲಾ ನಮಗೆ ಸರಿಯಾದ ಬೆಲೆ ಸಿಗುತ್ತಿಲ್ಲ ಎಂದು ಕೈಚೆಲ್ಲುವುದಾಗಲೀ ಅಥವಾ ಸಿಟ್ಟಿಗೇಳುವುದಾಗಲೀ ಮಾಡಬಾರದು. ಆ ರೀತಿ ನಮಗೆ ಸೂಕ್ತ ಬೆಲೆ ಸಿಗುತ್ತಿಲ್ಲ ಎಂದರೆ ನಾವು ಇರುವುದು ಸೂಕ್ತವಾದ ಸ್ಥಳವಲ್ಲಾ ಎಂದು ಅರ್ಥ. ನಮಗೆ ಸೂಕ್ತ ಬೆಲೆ ಕೊಡುವವವರು ನಮ್ಮನ್ನು ಮತ್ತು ನಮ್ಮ ಮೌಲ್ಯವನ್ನು ಸರಿಯಗಿ ಅರ್ಥ ಮಾಡಿಕೊಂಡಿರುತ್ತಾರೆ. ನಮಗೆ ಬೆಲೆ ಸಿಗದ ಕಡೆ ಹೆಚ್ಚು ಕಾಲಹರಣ ಮಾಡಬಾರದು. ನಮಗೆ ಬೆಲೆ ಕೊಡುವ ಸ್ಥಳಗಳನ್ನು ಗುರುತಿಸಿ ಅಲ್ಲಿಯೇ ಹೆಚ್ಚು ಮೌಲ್ಯ ಕಂಡುಕೊಳ್ಳಬೇಕು" ಎಂದ.

ಈ ಕಥೆ ಸರಳವಾಗಿರುವ ಕಾರಣ ಎಲ್ಲರಿಗೂ ಬಹಳ ಬೇಗ ಅರ್ಥ ಆಗುತ್ತದೆ. ಅವರು ನನಗೆ ಬೆಲೆ ಕೊಡಲಿಲ್ಲ, ಇವರು ನನ್ನನ್ನು ನೋಡಿ ಮಾತನಾಡಿಸಲಿಲ್ಲ, ಅವರು ನನ್ನ ಕಡೆ ತಿರುಗಿ ನೋಡುತ್ತಿಲ್ಲ, ಇವರು ನನ್ನನ್ನು ಉದಾಸೀನ ಮಾಡಿದರು ಅಂತೆಲ್ಲಾ ಗೊಣಗುತ್ತಾ ಕಾಲಹರಣ ಮಾಡಿಕೊಂಡು ಮನೋ ವೇದನೆ ಅನುಭವಿಸುವ ಬದಲು, ನಮಗೆ ಯಾರು ಬೆಲೆ ಕೊಡುತ್ತಾರೋ ಅಥವಾ ಯಾರು ನಮ್ಮೊಂದಿಗೆ ಸಮಯ ಕಳೆಯಲು ಇಷ್ಟ ಪಡುತ್ತಾರೋ ಅವರಿಗೆ ಉದಾರವಾಗಿ ನಮ್ಮ ಸಮಯ ಕೊಡೋಣ.

ಒಂದು ಮಾತು ಮಾತ್ರ ಸತ್ಯ. ಎಲ್ಲರೂ ಮೆಚ್ಚಿಕೊಳ್ಳಲಿ ಅಂತಾ ಅಥವಾ ಎಲ್ಲರೂ ಮೆಚ್ಚುವಂತೆ ಬಾಳತ್ತೇನೆ ಅನ್ನುವ ಭ್ರಮೆಯಲ್ಲಿ ಬದುಕಬಾರದು. ಆ ರೀತಿ ಮಾಡಲು ಒಂದು ಇಡೀ ಜನ್ಮವಾದರೂ ಸಾಲದು.

**• ರೊ. ಎಂ. ಮಾಧವಾಚಾರ್**

SEP



## 3. Basic Education and Literacy Month

- Initiate E- learning and Happy School projects
- Conduct Adult Literacy programs - Involve youngsters and college students.
- Distribute books (especially Value Based educational books) to school libraries and encourage reading habit.
- Focus on new ideas like training Primary and Preprimary teachers to include and involve special children and children with learning disorders.
- Plan programs with the Education Department in promoting literacy.

## THE 4-WAY TEST

... of the things we think, say, do

1. Is it the TRUTH
2. Is it FAIR to all concerned?
3. Will it build GOODWILL & BETTER FRIENDSHIP?
4. Will it be BENEFICIAL to all concerned?

## ಜನ್ಮ ದಿನದ ಶುಭಾಶಯಗಳು

|  |  |  |  |
|---|---|---|---|
| R. Anand<br>26th Sept | Rakesh Gowda<br>26th Sept | *N.H.Prabhakar*<br>*28th Sept* | *Geethanjali P.*<br>*29th Sept* |

To,

*Book Post*

ಮುದ್ರಣ: ರಾಯಲ್ ಪ್ರಿಂಟರ್ಸ್, ಶಿವಮೊಗ್ಗ, 98862 73495